# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1241 |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ ರುದ್ರಪ್ಪ |
| ಉತ್ತರಿಸುವ ದಿನಾಂಕ | : | 30-09-2020 |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ಸಂಸ್ಥೆಯ ಅಧೀನದ ವಸತಿ ಶಾಲೆಗಳಲ್ಲಿ ಖಾಲಿಯಿರುವ ಪ್ರಾಂಶುಪಾಲರ ಹುದ್ದೆಗಳೆಷ್ಟು: | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲಾ/ಕಾಲೇಜುಗಳಲ್ಲಿ 488 ಪ್ರಾಂಶುಪಾಲರ ಹುದ್ದೆಗಳು ಖಾಲಿಯಿರುತ್ತವೆ. |
| ಆ) | ಸದರಿ ಖಾಲಿಯಿರುವ ಪ್ರಾಂಶುಪಾಲರ ಹುದ್ದೆಗಳಲ್ಲಿ ವಸತಿ ಶಾಲಾ ಶಿಕ್ಷಕರುಗಳಿಗೆ ಯಾವ ನಿಯಮದಡಿಯಲ್ಲಿ ಪ್ರಭಾರದಲ್ಲಿರಿಸಲಾಗುವುದು; (ಮಾಹಿತಿ ಒದಗಿಸುವುದು) | ವಸತಿ ಶಾಲೆಗಳಲ್ಲಿ ಖಾಲಿಯಿರುವ ಪ್ರಾಂಶುಪಾಲರ ಹುದ್ದೆಗಳಿಗೆ ಆ ಶಾಲೆಯಲ್ಲಿ ಖಾಯಂ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳಲ್ಲಿ ಅರ್ಹತೆ ಮತ್ತು ಜೇಷ್ಠತೆಯ ಆಧಾರದ ಮೇಲೆ ತಾತ್ಕಾಲಿಕವಾಗಿ ಪ್ರಾಂಶುಪಾಲರ ಹುದ್ದೆಯಲ್ಲಿ ಪ್ರಭಾರದಲ್ಲಿರಿಸಲಾಗುತ್ತಿದೆ. |
| ಇ) | ಪ್ರಭಾರದಲ್ಲಿರಿಸಿದ ಸಿಬ್ಬಂದಿಗಳಿಗೆ ಇದುವರೆಗೆ ಮಂಜೂರಾದ ಪ್ರಭಾರ ಭತ್ಯೆ ಎಷ್ಟು: (ವಿವರ ನೀಡುವುದು) | ವಸತಿ ಶಾಲೆಗಳ ಆಡಳಿತಾತ್ಮಕ/ ಶೈಕ್ಷಣಿಕ ನಿರ್ವಹಣಾ ಹಿತ ದೃಷ್ಟಿಯಿಂದ ಅರ್ಹತೆ ಮತ್ತು ಜೇಷ್ಠತೆಯ ಆಧಾರದ ಮೇಲೆ ಪ್ರಾಂಶುಪಾಲರ ಹುದ್ದೆಯಲ್ಲಿ ಪ್ರಭಾರದಲ್ಲಿರಿಸಲಾಗುತ್ತಿದ್ದು, ಸದರಿ ಶಿಕ್ಷಕರಿಗೆ ಪ್ರತ್ಯೇಕವಾಗಿ ಯಾವುದೇ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಿರುವುದಿಲ್ಲ.<br><br>ವಸತಿ ಶಾಲೆಗಳಿಗೆ ಪೂರ್ಣಕಾಲಿಕ ಪ್ರಾಂಶುಪಾಲರ ಅವಶ್ಯಕತೆಯಿರುತ್ತದೆ. ಪ್ರಸ್ತುತ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕ ವೃಂದದವರನ್ನು ಜೇಷ್ಠತೆಯ ಆಧಾರದ ಮೇಲೆ ಶೇ% 75:25 ಅನುಪಾತದಂತೆ ಮುಂಬಡ್ತಿ ಮುಖಾಂತರ ಪ್ರಾಂಶುಪಾಲರ ಹುದ್ದೆಗೆ ಭರ್ತಿ ಮಾಡಿಕೊಳ್ಳಲು ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಈಗಾಗಲೇ ತಾತ್ಕಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, 310 ಆಕ್ಷೇಪಣೆಗಳು ಸ್ವೀಕೃತಗೊಂಡಿರುತ್ತವೆ. ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಶೀಲಿಸಲು ಆಂತರಿಕ ಸಮಿತಿಯನ್ನು ರಚಿಸಲಾಗಿದ್ದು, ಅಂತಿಮ ಜೇಷ್ಟತೆ ಪಟ್ಟಿಯನ್ನು ಪ್ರಕಟಿಸಿದ ನಂತರ ನಿಯಮಾನುಸಾರ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ನೀಡಲು ಕ್ರಮವಹಿಸಲಾಗುವುದು. |
| ಈ) | ಇಲ್ಲಾವಾದಲ್ಲಿ ಪ್ರಭಾರ ಭತ್ಯೆಯನ್ನು ನೀಡದಿರಲು ಕಾರಣಗಳೇನು: ಸದರಿ ವಸತಿ ಶಾಲೆಗಳಿಗೆ ಪೂರ್ಣ ಕಾಲಿಕ ಪ್ರಾಂಶುಪಾಲರ ಅವಶ್ಯಕತೆಯಿಲ್ಲವೇ; ಅವಶ್ಯಕತೆಯಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು? | |

**ಸಂಖ್ಯೆ: ಸಕಇ 324 ಮೊದೇಶಾ 2020**

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ
ಸಮಾಜ ಕಲ್ಯಾಣ ಇಲಾಖಾ ಸಚಿವರು.

1758493/2020/O/o DS(Admin)


ಎಸ್. ಅಂಗಾರ

**ಶಾಸಕರು,** ಸುಳ್ಯ, ವಿಧಾನ ಸಭಾ ಕ್ಷೇತ್ರ

**ಅಧ್ಯಕ್ಷರು,** ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ.

ದೂರವಾಣಿ 08257-230525 : ಕಛೇರಿ
230336 : ತಾ. ಪಂ. ಕಛೇರಿ
284019, 284209 : ಮನೆ
080-22359310 : ಶಾಸಕರ ಭವನ
94483 77209 : ಮೊಬೈಲ್

ಕೌಸ್ತುಭ ನಿಲಯ
ದಾಸನಕಜೆ ಕುಂಟಿಕಾನ
ಅಮರಮುಡ್ನೂರು ಗ್ರಾಮ, ಅಂಚೆ : ದೊಡ್ಡತೋಟ
**ಸುಳ್ಯ ತಾಲ್ಲೂಕು, ದ.ಕ. 574 248**


ಶಾ.ಭ.ಪ. ಸಂಖ್ಯೆ /

ಶಾ.ಕ.ಪ. ಸಂಖ್ಯೆ /

ದಿನಾಂಕ 23/9/2020

ರಿಗೆ,

ಸನ್ಮಾನ್ಯ ಮುಖ್ಯಮಂತ್ರಿಗಳು.
ಕರ್ನಾಟಕ ಸರಕಾರ, ವಿಧಾನಸೌಧ
ಬೆಂಗಳೂರು.

ಬಿ. ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಮಾನ್ಯರೇ,

ವಿಷಯ:- ಶ್ರೀ ರವಿಕಾಂತ್ ಕಾಮತ್ ಅಧೀಕ್ಷಕ ಇಂಜಿನಿಯರ್(ವಿ.) ಇವರನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪೆನಿ (ಮೆಸ್ಕಾಂ.) ವಿಭಾಗದಲ್ಲಿ ಖಾಲಿಯಿರುವ ಅಧೀಕ್ಷಕ ಇಂಜಿನಿಯರ್(ವಿ.) (SEE-SCADA) ಹುದ್ದೆಗೆ ವರ್ಗಾಯಿಸಿ ನೇಮಕಗೊಳಿಸುವ ಕುರಿತು.

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ರವಿಕಾಂತ್ ಕಾಮತ್, ಇವರು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಮಂಗಳೂರು (ಕಾಮಗಾರಿ&ನಿರ್ವಹಣೆ) ವೃತ್ತದಲ್ಲಿ ಪ್ರಸ್ತುತ ಅಧೀಕ್ಷಕ ಇಂಜಿನಿಯರ್ (ವಿ.) ಆಗಿ ಕಾರ್ಯನಿರ್ವಹಿಸಿಕೊಂಡು ಬರುತ್ತಿದ್ದು, ಸದ್ರಿಯವರು ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯಾಗಿರುತ್ತಾರೆ. ಸದ್ರಿಯವರು ಇದೀಗ ಕೆಲವೊಂದು ಕೌಟುಂಬಿಕ ಹಾಗೂ ವೈಯಕ್ತಿಕ ಕಾರಣಗಳಿಂದ ಮಂಗಳೂರು ವಿದ್ಯುತ್ ಸರಬರಾಜು ಕಂಪೆನಿ (ಮೆಸ್ಕಾಂ.) ಇಲ್ಲಿ ಖಾಲಿಯಿರುವ ಅಧೀಕ್ಷಕ ಇಂಜಿನಿಯರ್(ವಿ.) (SEE-SCADA) ಹುದ್ದೆಗೆ ವರ್ಗಾವಣೆ ಕೋರಿರುತ್ತಾರೆ. ಆದುದರಿಂದ ಸದ್ರಿಯವರ ಮನವಿಯನ್ನು ಪರಿಗಣಿಸುವರೇ ಈ ಮೂಲಕ ಕೋರಿಕೆ.

ವಂದನೆಗಳೊಂದಿಗೆ,

ಇತೀ ತಮ್ಮ ವಿಶ್ವಾಸಿ,

23/9/2020
ಎಸ್. ಅಂಗಾರ
ಶಾಸಕರು,
ಸುಳ್ಯ ವಿಧಾನಸಭಾ ಕ್ಷೇತ್ರ.